| CC 367/2024 | PW-1 |
|---|---|

ಸಾಕ್ಷಿಗೆ ವಿಧಿಬದ್ಧವಾಗಿ ದಿನಾಂಕ 04.03.2026 ರಂದು ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ– ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ನಾನು ನ್ಯಾಯಾಲಯದ ಆದೇಶದ ಮೇರೆಗೆ ಆರೋಪಿಯು ಕಳ್ಳತನ ಮಾಡಿದಂತಹ ನನಗೆ ಸೇರಿದ 5 ಗ್ರಾಂ ಚಿನ್ನದ ತಾಳಿ, ಚಿನ್ನದ ಪೀಸುಗಳು ಮತ್ತು ಚಿನ್ನದ ಕಾಸುಗಳನ್ನು ಪೊಲೀಸರಿಂದ ಬಿಡುಗಡೆ ಮಾಡಿಸಿಕೊಂಡಿರುತ್ತೇನೆ. ಬಿಡುಗಡೆ ಮಾಡುವ ಸಂದರ್ಭದಲ್ಲಿ ಸಾಕ್ಷಗಳ ಸಮಕ್ಷಮದಲ್ಲಿ ಮಹಜರ್ ನಡೆಸಿ ಫೋಟೋಗಳನ್ನು ತೆಗೆದು ಮೇಲೆ ಹೇಳಿದ ಚಿನ್ನವನ್ನು ನನಗೆ ಬಿಡುಗಡೆ ಮಾಡಿರುತ್ತಾರೆ ಸದರಿ ಫೋಟೋಗಳನ್ನು ನಿಪಿ- 4 ರಿಂದ 7 ಎಂದು ಗುರುತಿಸಲಾಯಿತು. ಸಾಕ್ಷಿಗೆ ಬಿಡುಗಡೆ ಮಹಜರ್ ನ್ನು ತೋರಿಸಿದ್ದು ಹೆಬ್ಬೆಟ್ಟು ಗುರುತು ಮಾಡಿರುತ್ತೇನೆ ಎಂದು ನುಡಿದಿರುತ್ತಾರೆ, ಸಾಕ್ಷಿಯು ಒಪ್ಪಿಕೊಂಡ ಕಾರಣ ನಿಪಿ- 8 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಶವನ್ನು ಕೋರಿದ್ದು ಕಾಲಾವಕಾಶ ಕೊಡಲು ಯಾವುದೇ ಸಮಂಜಸ ಕಾರಣ ಇಲ್ಲದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು)

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದ ನ್ಯಾಯಾಲಯ ಯಳಂದೂರು.